ಶ್ರೀ ಎ. ಜಿ. ಕೊಡಗಿ,—ಮಾನ್ಯ ಸ್ನೇಹಿತರು ಹೇಳಿದ ಹಾಗೆ ಅದು ಬಹಳ ಪ್ರಮುಖ್ಯವಾದ ಒಂದು ಬಂದರು ಪ್ರದೇಶವಾಗಿದೆ. ಅಲ್ಲಿ ಸಹಸ್ರಾರು ಮಂದಿ ರಾತ್ರಿ-ಹಗಲು ಆಚೆ-ಈಚೆ ಹೋಗಬೇಕಾಗತ್ತದೆ, ಆವರಿಗೆ ಉಪಕಸಬುಗಳಿರುತ್ತದೆ. ಅಲ್ಲಿ ಬಂದರಿನವರು ಒಂದು ನಿರ್ದಿಷ್ಟವಾದ ಅವಧಿಯಲ್ಲಿ ಮಾತ್ರವೇ ಸಂಪರ್ಕದ ವ್ಯವಸ್ಥೆಯನ್ನು ಮಾಡಿಕೊಟ್ಟರೆ ಬಹಳ ಅನಾನುಕೂಲವಾಗುತ್ತದೆ. ಅವರಿಗೆ ಆ ವ್ಯವಸ್ಥೆಯನ್ನು ಸರಿಯಾಗಿ ಮಾಡಿಕೊಡಲು ಕಷ್ಟವಾದರೆ ಅದನ್ನು ತಾಲ್ಲೂಕು ಬೋರ್ಡಿನವರಿಗೆ ಬಿಟ್ಟು ಕೊಟ್ಟರೆ ಅನುಕೂಲವಾಗುತ್ತದೆ, ಇಲ್ಲದಿದ್ದರೆ ಬಹಳ ಜನರಿಗೆ ತೊಂದರೆಯಾಗುತ್ತದೆಂಬುದನ್ನು ಮಾನ್ಯ ಸಚಿವರು ಗಮನಿಸಬೇಕು,

ಶ್ರೀ ಪಿ. ಎಫ್. ರೋಡ್ರಿಗ್ಸ್.—ನಾನು ಈಗತಾನೇ ಹೇಳಿದೆ, ಕರ್ನಾಟಕ ಹಾರ್ಬರ್ ಕ್ರಾಫ್ಟ್ಸ್ ರೂಲ್ಸ್ ಪ್ರಕಾರ ಸಂಜೆ ೬ ರಿಂದ ಬೆಳಗಿನ ೬ ರವರೆಗೆ ಅಲ್ಲಿ ಸಂಚಾರ ಮಾಡಕೂಡದೆಂದು ನಿರ್ಬಂಧನೆ ಇದೆ ಎಂದು. ಇನ್ನೊಂದು ಏನೆಂದರೆ ಅಲ್ಲಿ ರೆಡ್ ಲೈಟನ್ನು ಹಾಕಿದ ಸಮಯದಲ್ಲಿ ಹಗಲು ಹೊತ್ತು ಕೂಡ ಸಂಚಾರ ಮಾಡುವುದಕ್ಕೆ ಸಾಧ್ಯವಿಲ್ಲ. ಒಂದು ವೇಳೆ ಅಲ್ಲಿ ನಾವಿಗೇಷನ್ ಲೈಟ್ ಇದ್ದ ಪಕ್ಷದಲ್ಲಿ ರಾತ್ರಿ ವೇಳೆಯಾದರೂ ಕೂಡ ಹೋಗಬಹುದು.

ಶ್ರೀ ಎ. ಜಿ. ಕೊಡಗಿ.—ಮಾನ್ಯ ಮಂತ್ರಿಗಳು ಹೇಳುತ್ತಾರೆ ಕಾನೂನಿನ ನಿರ್ಬಂಧನೆ ಇದೆ ಎಂದು ಹೊಳೆಯ ಆಚೆಕಡೆ ಐಲ್ಯಾಂಡ್ ಪ್ರದೇಶವಿದೆ. ಅಲ್ಲಿ [ಬಹಳ ಮಂದಿ ವಾಸವಾಗಿದ್ದಾರೆ. ಅವರು ಹಗಲು ರಾತ್ರಿ ಸಂಚಾರ ಮಾಡಬೇಕಾಗುತ್ತದೆ, ಆದ್ದರಿಂದ. ಕಾನೂನಿನಲ್ಲಿ ತೊಡಕಿದ್ದರೆ ಅದನ್ನು ಸರಿಪಡಿಸಿ ಸರಿಯಾದ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಆದಕಾರಣ ಇದನ್ನೆಲ್ಲಾ ಪರಿಶೀಲನೆ ಮಾಡಿ ಹೊಳೆಯನ್ನು ದಾಟುವುದಕ್ಕೆ ಸೂಕ್ತವಾದ ವ್ಯವಸ್ಥೆಯನ್ನು ಮಾಡುವ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೀರಾ?]

ಶ್ರೀ ಪಿ. ಎಫ್. ರೋಡ್ರಿಗ್ಸ್.—ಅಲ್ಲಿ ರೆಡ್ ಲೈಟನ್ನು ಹಾಕಿದ ಮೇಲೆ ಹೋಗುವುದಕ್ಕೆ ಸಾಧ್ಯವಿಲ್ಲವೆಂದು ನಾನು ಈಗತಾನೇ ಹೇಳಿದೆ. ಮಳೆಗಾಲದಲ್ಲಂತು ಅಲ್ಲಿ ಹೋಗುವುದಕ್ಕೆ ಸಾಧ್ಯವಿಲ್ಲ. ಆದರೆ ಸಂಜೆ ೬ ರಿಂದ ಬೆಳಿಗ್ಗೆ ೬ರವರೆಗೆ ಅಲ್ಲಿನ ಸನ್ನಿವೇಶವನ್ನು ನೋಡಿಕೊಂಡು ಬೋಟುಗಳ ವ್ಯವಸ್ಥೆ ಮಾಡುವ ಬಗ್ಗೆ ನಾನು ಖಂಡಿತವಾಗಿ ನೋಡುತ್ತೇನೆ. ಅಲ್ಲಿ ಹಲವಾರು ಮಂದಿ ಮೀನುಗಾರರು ಕೆಲಸದಲ್ಲಿದ್ದಾರೆಂದು ಗೊತ್ತು.

Zippinakatte Tank in Hassan Town

92 SRI K. H. HANUMEGOWDA (Hassan),—Will the Minister for Municipal Administration be pleased to state:—

(*a*) whether it has come to the Notice of the Government that there is a minor tank called 'Chippinakatte' in the Western side of the new line street at Hassan Town;

(*b*) whether it is not a fact that thousands of poor people are residing around this tank ;

(*c*) whether it has come to the notice of the Government that it has become impossible for the people to reside around this area peacefully as bad smell is emanating from this tank due to the inflow of drainage water of Hassan Town to this tank;

(*d*) whether it is not a fact that it has become a nuisance to the people of the entire area due to the breeding of innumerable mosquitos every day in this tank;

(*e*) the reasons for not closing this tank inspite of so many difficulties?

SRI H. C. SRIKANTAIAH (Minister for Municipal Administration)—

(*a*) Yes.

(*b*) This tank is situated in the outskirts of the town and there are few houses in some parts of this tank.

(*c*) Yes.

(*d*) Yes. there is a mosquito menace.

(*e*) This tank which is useful for agriculturai purposes belongs to the Revenue Department, Hence, suitable action will be taken in consultation with the Revenue Department whether to close the tank or to clean it.

ಶ್ರೀ ಕೆ. ಹೆಚ್, ಹನುಮೇಗೌಡ.—ಹಾಸನದ ಒಂದು ಭಾಗದಲ್ಲಿ ಈ ಕೆರೆ ಇದೆ. ಆ ಕೆರೆಯ ೩ ಭಾಗಗಳಲ್ಲಿ ಸಾವಿರಾರು ಮನೆಗಳಿವೆ, ಆಲ್ಲಿ ಸೊಳ್ಳೆ ಕಾಟ ಇದೆ ಎಂಬುದನ್ನು ಇನ್ಸ್‌ಪೆಕ್ಟ್ ಕೂಡ ಮಾಡಿ ಮಾನ್ಯ ಮಂತ್ರಿಗಳು ಒಪ್ಪಿಕೊಂಡಿದ್ದಾರೆ. ಆ ಕೆರೆಯ ಹಿಂಭಾಗದಲ್ಲಿ ೩ ಎಕರೆ ಗದ್ದೆ ಇದೆ, ಆ ಕೆರೆಯ ಅಚ್ಚುಕಟ್ಟನ್ನು ಆಕ್ವೈರ್ ಮಾಡಿಕೊಂಡು ಸೈಟನ್ನು ಮಾಡುವುದರಿಂದ ಆ ಕೆರೆಯನ್ನು ಒಡೆಯುವುದಕ್ಕೆ ಸುಲಭವಾಗುತ್ತದೆ. ಆದ್ದರಿಂದ ಆಲ್ಲಿ ಸೈಟುಗಳನ್ನು ಹಂಚುವುದಕ್ಕೆ ವ್ಯವಸ್ಥೆ ಮಾಡುತ್ತೀರಾ?

†ಶ್ರೀ ಪೆಚ್. ಸಿ. ಶ್ರೀಕಂಠಯ್ಯ.—ನಾನು ಹಾಸನಕ್ಕೆ ಹೋಗಿದ್ದಾಗ ಮಾನ್ಯ ಹನುಮೇಗೌಡರು ಆ ಕೆರೆಯ ಸ್ಪಾಟ್ ಇನ್ಸ್‌ಪೆಕ್ಷನ್ ಮಾಡಿಸಿ, ಆದರ ಕೆಳಗೆ ಇರತಕ್ಕ ಗದ್ದೆಯನ್ನು ಆಕ್ಟ್ಯೆರ್ ಮಾಡಿ ನಿವೇಶನ ಇಲ್ಲದವರಿಗೆ ಕೊಡಬೇಕು ಮತ್ತು ಆ ಕೆರೆ ಇರುವುದರಿಂದ ಸೊಳ್ಳೆ ಕಾಟ ಬಹಳವಾಗಿದೆ ಎಂದು ಹೇಳಿದರು. ಅದನ್ನು ನಾನು ಪರಿಶೀಲಿಸಿದಾಗಲೂ ಕೂಡ ಅಲ್ಲಿ ನಿಜವಾಗಿಯೂ ಮಸ್ಕಿಟೊ ಮಿನೇಸ್ ಆಗಿದೆ. ಸಂಬಂಧ ಪಟ್ಟ ರೆವಿನ್ಯೂ ಅಧಿಕಾರಿಗಳಿಗೆ ಹೇಳಿ ಆ ಒಂದು ಸ್ಥಳವನ್ನು ಆಕ್ವೈರ್ ಮಾಡುವುದಕ್ಕೆ ಪ್ರೊಸೀಡಿಂಗ್ಸ್ ತೆಗೆದುಕೊಳ್ಳುವುದನ್ನು ಹೇಳಿದ್ದೇನೆ. ಡಿವಿಜನಲ್ ಕಮೀಷನರ್ ಕೂಡ ಇನ್ಸ್‌ಪೆಕ್ಟ್ ಮಾಡಿ ಜಿಲ್ಲಾಧಿಕಾರಿಗಳಿಗೆ ಒಂದು ಆದೇಶವನ್ನು ಕೊಟ್ಟಿದ್ದಾರೆ. ಆಕ್ವಿಷಿಷನ್ ಪ್ರೊಸೀಡಿಂಗ್ಸ್ ಜಿಲ್ಲಾಧಿಕಾರಿಗಳಿಗೆ ತಲುಪಿದೆ. ಅದು ಬಂದ ನಂತರ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಕೆ. ಹೆಚ್. ಹನುಮೇಗೌಡ.—ಆ ಕೆರೆಗೆ ಹಾಸನ ಟೌನಿನ ಅರ್ಧ ಭಾಗ ನೀರು ಬರುವುದರ ಜೊತೆಗೆ ಕೊಳಚೆ ನೀರು ಕೂಡ ಬರುತ್ತದೆ. ಹೀಗೆ ವಿಪರೀತ ಕೊಳಚೆ ನೀರು ನಿಂತು ಬಲು ಗಲೀಜಾಗಿ ಸೊಳ್ಳೆಗಳ ಕಾಟವೂ ಜಾಸ್ತಿಯಾಗುವುದರಿಂದ ಅಲ್ಲಿನ ಮುನಿಸಿಪಾಲಿಟಿಯ ಮುಖಾಂತರ ಡ್ರೈನೇಜ್ ಮಾಡಿಸಿ ಎಲ್ಲ ನೀರನ್ನು ಹೊರಗಡೆ ಪೋಗುವಂತೆ ಮಾಡಿಸಿ ಸೊಳ್ಳೆಗಳ ಕಾಟವನ್ನು ತಪ್ಪಿಸುವುದಕ್ಕೆ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಪೆಚ್. ಸಿ. ಶ್ರೀಕಂಠಯ್ಯ.—ಆ ಕೆರೆಗೆ ಹೋಗತಕ್ಕ ಎಲ್ಲ ನೀರನ್ನು ಹೊರಗಡೆ ಕಳುಹಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಡ್ರೈನೇಜ್ ಮಾಡಿದರೂ ಕೂಡ ಕೊಂಚ ನೀರು ಕೆರೆಗೆ ಬಂದು ನಿಂತೇ ನಿಲ್ಲುತ್ತದೆ ಮತ್ತು ಆದರಿಂದ ಸೊಳ್ಳೆಗಳ ಉತ್ಪತ್ತಿ ಆಗೇ ಆಗುತ್ತದೆ. ಒಟ್ಟಿನಲ್ಲಿ ಆ ಜಮೀನನ್ನು ಆಕ್ವೈರ್ ಮಾಡಿಕೊಂಡು ನಿವೇಶನ ಮಾಡುವುದಕ್ಕೆ ಸಾಧ್ಯವಾಗುತ್ತದೆ, ಆದರೆ ಡ್ರೈನೇಜ್ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ; ಅದನ್ನು ಮಾಡಿದರೂ ಕೂಡ ಅದಕ್ಕೆ ಅನವಶ್ಯಕವಾಗಿ ಹಣ ಖರ್ಚಾಗುತ್ತದೆ.

ಶ್ರೀ ಕೆ. ಹೆಚ್. ಹನುಮೇಗೌಡ.—ಜಮೀನನ್ನು ಆಕ್ವೈರ್ ಮಾಡಿಕೊಳ್ಳುವುದಕ್ಕೆ ಆದೇಶವನ್ನು ಕೊಟ್ಟಿದ್ದೇನೆಂದು ತಿಳಿಸಿದ್ದೀರಿ. ಹಾಗಾದರೆ ಎಷ್ಟು ದಿವಸದಲ್ಲಿ ಅಥವಾ ಎಷ್ಟು ತಿಂಗಳಲ್ಲಿ ಆ ಕೆರೆಯನ್ನು ಮುಚ್ಚಿಸುವುದಕ್ಕೆ ವ್ಯವಸ್ಥೆ ಮಾಡುತ್ತೀರಿ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಅಕ್ವಿಸಿಷನ್ ಪ್ರೊಸೀಡಿಂಗ್ಸ್ ಬಗ್ಗೆ ಕಾನೂನು ಕಟ್ಟಲೆ ಯಾವ ರೀತಿ ಇದೆ ಎಂಬುದು ಮಾನ್ಯ ಸದಸ್ಯರಿಗೂ ಗೊತ್ತಿದೆ. ಅದಕ್ಕೆ ನೋಟೀಸ್ ಕೊಡಬೇಕು. ಕೆರೆ ಬೇಕಾದರೆ ಒಡೆದುಹಾಕಬಹುದು. ಏಕೆಂದರೆ ಅದು ರೆವಿನ್ಯೂ ಡಿಪಾರ್ಟ್‌ಮೆಂಟಿಗೆ ಸೇರಿರುವುದರಿಂದ ಅವರ ಪರ್ಮಿ

ಹಣ ತೆಗೆದುಕೊಂಡು ಒಡೆಯಬಹುದು. ಆದರೆ ಜಮೀನು ಆಕ್ವೈರ್ ಮಾಡಿಕೊಳ್ಳಬೇಕಾದರೆ ಕೆಲವು ಫಾರ್ಮಾಲಿಟೀಸ್ ಅನುಸರಿಸಿ ಮಾಡಬೇಕಾಗುತ್ತದೆ, ಆದ್ದರಿಂದ ಸ್ವಲ್ಪ ಕಾಲಾವಕಾಶ ಬೇಕಾಗುತ್ತದೆ. ಇಷ್ಟೇ ಎಂದು ನಿಗದಿಯಾಗಿ ಕಾಲ ಹೇಳುವುದು ಕಷ್ಟವಾಗುತ್ತದೆ.

1-30 P. M.

SHORT NOTICE QUESTION AND ANSWER

Teachers Training Institutions and B.ed., colleges at K.G.F.

44. SRI C.M. ARMUGHAM (K.G.F.)—Will the Minister for Education be pleased to state :—

(a) the number of students admitted in the Teacher's Training Institute and B.Ed., Colleges at K.G.F. during the last three years;

(b) donations collected from the local candidates and from outsiders ;

(c) whether they are running the institutions in rented buildings or of their own; if it is a rented building to whom does it belong and the rent paid per month ;

(d) the number of SC/ST students admitted in these institutions ; and

(e) how these institutions are beneficial to the State students in their continuous functioning ?

SRI B. SUBBAYYA SHETTY (Minister for Education).—

(a)—

	1975-76	1976-77	1977-78
TCH I year	170	200	252
TCH II year	121	170	203
B.Ed.	110	100	60
Colleges (Karnataka)	26	22 (K)	17(K)

(b) TCH-50 local candidates free education other Rs. 300

B.Ed. Local Rs. 200 to Rs. 1000

outsiders: Rs. 1000 to Rs. 3000

small number admitted without fees.

(c) TCH-Rented building It belongs to the Robertsonpet Co-op. Society (under liquidation) Rent paid-Rs. 250 p.m. B.Ed. Own building belongs to College.

(d) TCH-56 candidates B.Ed. not recorded during 1975-76 and 76-77 in the registers. 3 candidates were admitted during 1977-78.